# ಕರ್ನಾಟಕ ವಿಧಾನ ಪರಿಷತ್ತು

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ, ಇವರು ಶೂನ್ಯ ವೇಳೆಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

**ಸೂಚನೆ:**

ದಾವಣಗೆರೆಯ ದೇವರಾಜ ಅರಸು ಬಡಾವಣೆಯ ನಿವಾಸಿಯಾದ ಶ್ರೀ ಶೈಲೇಶಕುಮಾರ್ ಪಿ ಇವರು ರಾಟ್ ವೈಲರ್ ತಳೀಯ 3 ನಾಯಿ ಸಾಕಿದ್ದು, ಆಕ್ರಮಣಕಾರಿಯಾಗಿದ್ದ 2 ನಾಯಿಗಳು ಶೈಲೇಶಕುಮಾರ್ ಹಾಗೂ ಅವರ ಮಾವನ ಮೇಲೆ 2-3 ಬಾರಿ ದಾಳಿ ನಡೆಸಿದ್ದವು. ಕಚ್ಚಿ ಗಾಯಗೊಳಿಸಿದ್ದವು. ಇದರಿಂದ ಬೇಸತ್ತಿದ್ದ ಅವರು 2 ನಾಯಿಗಳನ್ನು ರಾತ್ರೋ ರಾತ್ರಿ ಆಟೋದಲ್ಲಿ ಸಾಗಿಸಿ ಹೊನ್ನೂರು ಗೊಲ್ಲರಹಟ್ಟಿ ಸಮೀಪ ಬಿಟ್ಟು ಬಂದಿದ್ದರು ಎಂದು ಗ್ರಾಮೀಣ ಠಾಣೆ ಪೋಲೀಸರು ಮಾಹಿತಿ ನೀಡಿದರು. ನಾಯಿಗಳು ಅನಿತಾ ಎಂಬುವವರ ಮಹಿಳೆ ಮೇಲೆ ತೀವ್ರ ದಾಳಿ ನಡೆಸಿದ್ದವು. ಗಂಭೀರವಾಗಿ ಗಾಯಗೊಂಡಿದ್ದ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದವು. ಗ್ರಾಮಸ್ಥರು ಸೆರೆ ಹಿಡಿದ ನಂತರ ಈ ಶ್ವಾನಗಳು ಶನಿವಾರ ಮೃತಪಟ್ಟಿದ್ದರು. ದಾಳಿ ನಡೆಸಿ ಮಹಿಳೆಯ ಸಾವಿಗೆ ಕಾರಣವಾಗಿದ್ದ ರಾಬ್ ವೈಲರ್ ತಳಿಯ ಎರಡು ಶ್ವಾನಗಳ ಮಾಲೀಕನನ್ನು ಪೋಲೀಸರು ಭಾನುವಾರು ಬಂಧಿಸಿದ್ದಾರೆ. ಮನುಷ್ಯ ಸ್ನೇಹಿ ಸಾಕು ಪ್ರಾಣಿಗಳ ಬಗ್ಗೆ ಕಠಿಣ ನೀತಿ ನಿಯಮಗಳನ್ನು ಇಲ್ಲದಿರುವುದರಿಂದ ಈ ರೀತಿಯ ಪ್ರಕರಣಗಳು ಜರುಗುತ್ತಿವೆ. ಕೇಂದ್ರ ಸರ್ಕಾರವು ಈಗಾಗಲೇ ವಿದೇಶಿ ತಳಿಯ ನಾಯಿಗಳನ್ನು ಇಂಪೋರ್ಟ ಮಾಡುವುದನ್ನು ನಿಷೇಧಿಸಿದೆ ಹಾಗೂ ಈ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಿದ ಕಾರಣಕ್ಕಾಗಿ, ವಿದೇಶಿ ನಾಯಿಗಳನ್ನು ನಮ್ಮ ರಾಜ್ಯದಲ್ಲಿ ಸಾಕುವುದರಿಂದ ಪ್ರತಿಬಂಧಿಸಲು ಅಗತ್ಯ ಕಾನೂನು ನಿಯಮಾವಳಿಗಳನ್ನು ರಚಿಸಬೇಕೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

**ಹೇಳಿಕೆ:**

ಭಾರತ ಸರ್ಕಾರದ ಪಶುಸಂಗೋಪನೆ ಮತ್ತು ಡೈರಿ ಇಲಾಖೆಯು ಪತ್ರ ಸಂಖ್ಯೆ: V-11/1/2024-Anlm_Dadf ದಿನಾಂಕ:12.03.2024 ರಂದು ಹೊರಡಿಸಿರುವ ಪತ್ರದಲ್ಲಿ ವಿದೇಶಿ ತಳಿಯ ನಾಯಿಗಳ ಆಮದು, ಸಾಕಣೆ ಮತ್ತು ಮಾರಾಟವನ್ನು ನಿಷೇಧಿಸುವ ಕುರಿತು ಸೂಚನೆಗಳನ್ನು ನೀಡಿರುತ್ತದೆ.

ಈ ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ WP No.8409/2024 (GM-RES) ಹಾಗೂ ಮಾನ್ಯ ಉಚ್ಚ ನ್ಯಾಯಾಲಯ, ದೆಹಲಿ ಇಲ್ಲಿ WP No.4374/2024 ಪ್ರಕರಣಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯಗಳು ಕ್ರಮವಾಗಿ ದಿನಾಂಕ:10.04.2024 ಮತ್ತು ದಿನಾಂಕ:16.04.2024 ರಂದು ತಾತ್ಕಾಲಿಕ ತಡೆಯಾಜ್ಞೆ ನೀಡಿರುತ್ತವೆ.

ಮಾನ್ಯ ನ್ಯಾಯಾಲಯಗಳ ತಾತ್ಕಾಲಿಕ ತಡೆಯಾಜ್ಞೆ ಆದೇಶದ ಹಿನ್ನಲೆಯಲ್ಲಿ, ಭಾರತ ಸರ್ಕಾರವು ದಿನಾಂಕ:02.05.2024 ರಂದು ಹೊರಡಿಸಿರುವ ಸಾರ್ವಜನಿಕ ಪ್ರಕಟಣೆಯಲ್ಲಿ ಪತ್ರ ಸಂಖ್ಯೆ: V-11/1/2024-Anlm_Dadf ದಿನಾಂಕ:12.03.2024ರಲ್ಲಿನ ನಿಷೇಧ ಸೂಚನೆಗಳನ್ನು ಮುಂದಿನ ಆದೇಶಗಳವರೆಗೆ ಜಾರಿಗೊಳಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿರುತ್ತದೆ.

**ಸಂಖ್ಯೆ:ಪಸಂಮೀ 294 ಸಲೆವಿ 2025**

(ಕೆ.ವೆಂಕಟೇಶ್)

**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.**